ಅನುಬಂಧ – 2

ಪ್ರಶ್ನೆ ಸಂಖ್ಯೆ – 3057

ತಾಲ್ಲೂಕು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾಲಯ	ಕೃತಕ ಗರ್ಭಧಾರಣ ಕೇಂದ್ರಗಳು	ಸಂಚಾರಿ ಪಶು ಚಿಕಿತ್ಸಾಲಯ
ಚಿಕ್ಕಮಗಳೂರು	2	8	16	0	1
ಕಡೂರು	5	15	14	2	1
ತರೀಕೆರೆ	2	9	9	–	1
ಮೂಡಿಗೆರೆ	2	11	8	–	1
ಕೊಪ್ಪ	1	4	6	–	1
ಶೃಂಗೇರಿ	1	2	1	–	1
ನರಸಿಂಹರಾಜ	2	2	2	–	1
ಒಟ್ಟು	15	51	56	2	7

2705 (2949) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು;

ಆ) ಪಶುಚಿಕಿತ್ಸಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ಸಂಖ್ಯೆ ಎಷ್ಟು;

ಇ) ಪಶುಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ಹುದ್ದೆಗಳವಾರು ವಿವರ ನೀಡುವುದು);

ಈ) ಪಶುಚಿಕಿತ್ಸಾಲಯಗಳಲ್ಲಿ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಊ) ಹೊನ್ನಾಳಿ ತಾಲ್ಲೂಕಿನಲ್ಲಿ ಹೊಸದಾಗಿ ಎಷ್ಟು ಪಶುಚಿಕಿತ್ಸಾಲಯಗಳನ್ನು ತೆರೆಯಲಾಗುವುದು;

ಎ) ಹಾಗಿದ್ದಲ್ಲಿ ಯಾವಾಗ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 10 ಪಶು ಚಿಕಿತ್ಸಾಲಯಗಳು ಸೇರಿದಂತೆ 32 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಇವೆ.

ಆ) ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಮಂಜೂರು ಆಗಿರುವ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳು ಈ ಕೆಳಕಂಡಂತೆ ಇದೆ.

ಹುದ್ದೆಗಳು	ಮಂಜೂರಾದ ಹುದ್ದೆಗಳು	ಭರ್ತಿ	ಖಾಲಿ
ಪಶುವೈದ್ಯಾಧಿಕಾರಿ	12	7	5
ಪಶುವೈದ್ಯಕೀಯ ಮೇಲ್ವಿಚಾರಕರು	1	–	1
ಪಶುವೈದ್ಯಕೀಯ ಪರೀಕ್ಷಕರು	16	8	8
ಪಶುವೈದ್ಯಕೀಯ ಸಹಾಯಕರು	18	11	7
ವಾಹನ ಚಾಲಕರು	1	–	1
ಡಿ ದರ್ಜೆ ನೌಕರರು	44	28	16
ಒಟ್ಟು	**92**	**54**	**38**

ಇ) ಮೇಲಿನಂತೆ

ಈ) ಬಂದಿದೆ.

ಉ) ರಾಜ್ಯದಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಪಶುವೈದ್ಯಾಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಕ್ರಿಯೇ ಪ್ರಾರಂಭಗೊಂಡಿದೆ. 250 ಪಶುವೈದಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿ ನಿಯಮದಡಿಯಲ್ಲಿ ನೇಮಕ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ ಹಾಗೂ 192 ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಶೀಲನೆಯಲ್ಲಿದೆ. ಪಶುವೈದ್ಯಕೀಯ ಮೇಲ್ವಿಚಾರಕರು ಹಾಗೂ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು 50:50 ರ ಅನುಪಾತದಲ್ಲಿ ಪಶುವೈದ್ಯಕೀಯ ಸಹಾಯಕ ಮುಂಬಡ್ತಿ ಹಾಗೂ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಡಿ ಗ್ರೂಪ್ ನೌಕರರಿಗೆ ಅಗತ್ಯ ತರಬೇತಿ ನೀಡಿ ಮುಂಬಡ್ತಿ ನೀಡುವ

ಮೂಲಕ ಭರ್ತಿ ಮಾಡಲಾಗುವುದು. ವಾಹನ ಚಾಲಕರ ಖಾಲಿ ಹುದ್ದೆಗಳನ್ನು ಭಾರಿ ವಾಹನ ಚಾಲನೆ ಪರವಾನಗಿ ಪಡೆದ ಡಿ ದರ್ಜೆ ನೌಕರರಿಗೆ ಮುಂಬಡ್ತಿ ನೀಡಲು ಪರಿಶೀಲಿಸಲಾಗುತ್ತಿದೆ. ಹಾಗೂ ಡಿ ದರ್ಜೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇರೆಗೆ ಹಾಗೂ ಇತರೆ ಇಲಾಖೆಗಳಿಂದ ಮರು ವಿನ್ಯಾಸ ಮೂಲಕ ಭರ್ತಿ ಮಾಡಲಾಗುತ್ತಿದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ಊ) ರಾಜ್ಯದಲ್ಲಿ ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟು ಇದ್ದು ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯಲು ಪ್ರಸ್ತುತ ಅವಶ್ಯಕತೆ ಕಂಡು ಬರುವುದಿಲ್ಲ ಹಾಗೂ ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಕಾರ್ಯಕ್ರಮ ಇರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

2706 (2953) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಬಾಲಕರ ಹಾಗೂ ಬಾಲಕಿಯರ ಮೆಟ್ರಿಕ್–ಪೂರ್ವ ಮತ್ತು ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; ಅವು ಯಾವುವು;

ಆ) ಈ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಹೊಸದಾಗಿ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಬಗ್ಗೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಮಿತಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಈ) ಹೊಸದಾಗಿ ಹಾಸ್ಟೆಲ್‌ಗಳನ್ನು ಯಾವಾಗ ಪ್ರಾರಂಭಿಸಲಾಗುವುದು;

ಉ) ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಯಾವಾಗ ಹೆಚ್ಚಿಸಲಾಗುವುದು;

ಊ) ಹೊಸದಾಗಿ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲು ಹಾಗೂ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ 4 ಬಾಲಕರ ಹಾಗೂ 3 ಬಾಲಕಿಯರ ಹೀಗೆ ಒಟ್ಟು 7 ಕೆಳಕಂಡ ಮೆಟ್ರಿಕ್– ಪೂರ್ವ ವಿದ್ಯಾರ್ಥಿನಿಲಯಗಳಿರುತ್ತವೆ. ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು ಯಾವುದೂ ಇರುವುದಿಲ್ಲ.